ನಿನ್ನೆ ಈ ಸಕ್ಕರೆ ಕಾರ್ಖಾನೆಯ ಮ್ಯಾನೇಜಿಂಗ್ ಡೈರಕ್ಟರ್‌ರವರನ್ನು ಕರೆದು ಈ ವಿಚಾರವನ್ನು ಚರ್ಚೆ ಮಾಡಿದ್ದಾರೆ. ಅವರು ಜೂನ್ ತಿಂಗಳ ಮೊದಲನೆಯ ವಾರದಲ್ಲಿ 3 ರಿಂದ 4 ಕೋಟಿ ರೂಪಾಯಿಗಳ ಅರಿಯರ್ಸ್ ಕೊಡುವುದಕ್ಕೆ ಒಪ್ಪಿದ್ದಾರೆ. ಅವರು ಅದನ್ನು ಕೊಡದೇ ಹೋದರೆ ಆ ಕಾರ್ಖಾನೆಯ ಮೇಲೆ ಉಗ್ರವಾದಂತಹ ಕ್ರಮ ತೆಗೆದುಕೊಳ್ಳುತ್ತೇವೆ, ನಾನೂ ಸಹ ಆ ಕಾರ್ಖಾನೆಯ ಮ್ಯಾನೆಜಿಂಗ್ ಡೈರಕ್ಟರ್ ರವರಿಗೆ ಜೂನ್ ತಿಂಗಳ ಒಳಗೆ ರೈತರಿಗೆ ಈ ಪೆಂಡಿಂಗ್ ಹಣವನ್ನು ಕೊಡಬೇಕೆಂದು ಹೇಳಿದ್ದೇನೆ. ಅದಕ್ಕೆ ಅವರು ಜೂನ್ ತಿಂಗಳ ಮೊದಲ ವಾರದೊಳಗೆ ಪೇಮೆಂಟ್ ಶುರು ಮಾಡುತ್ತೇವೆಂದು ಹೇಳಿ ಹೋಗಿದ್ದಾರೆ. ಅವರು ಇದನ್ನು ಕೊಡುತ್ತಾರೆಂದು ನಾನು ಮಾನ್ಯ ಪುಟ್ಟಣ್ಣಯ್ಯನವರಿಗೆ ತಿಳಿಸಬಯಸುತ್ತೇನೆ. ಇನ್ನು ಎರಡನೆಯ ವಿಚಾರ 2-3 ಸಕ್ಕರೆ ಕಾರ್ಖಾನೆಗಳಿಗೆ ಅವು ಹೇಮಾವತಿ ಶುಗರ್ ಫ್ಯಾಕ್ಟರಿ ಮತ್ತು ಚುಂಚನಕಟ್ಟೆ ಬನ್ನೇರಮ್ಮ ಸಕ್ಕರೆ ಕಾರ್ಖಾನೆಗಳ ಮೀಟಿಂಗ್ ಅನ್ನು ಮಂಡ್ಯದಲ್ಲಿ ಮಾಡಿದ್ದಾರೆ, ಅವರು ಒಂದೊಂದು ಲಕ್ಷ ಟನ್ ಕಬ್ಬನ್ನು ತೆಗೆದುಕೊಳ್ಳಬೇಕೆಂದು ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಅವರಿಗೆ ಒಂದೊಂದು ಲಕ್ಷ ಟನ್ ಹೆಚ್ಚುವರಿ ಕಬ್ಬನ್ನು ಸಾಗಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಮತ್ತೆ ಮಂಡ್ಯದಲ್ಲಿ 25ನೇ ತಾರೀಖಿನಂದು ಮೀಟಿಂಗ್ ಕರೆದಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಅರಣ್ಯ ಲೂಟಿ

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತರುವುದೆನೆಂದರೆ ಕೊಡಗು ಜಿಲ್ಲೆಯಲ್ಲಿ ಅರಣ್ಯ ಲೂಟಿ ಸತತವಾಗಿ ನಡೆಯುತ್ತಿದೆ. ನಾನು ಸದನದಲ್ಲಿ ಉಲ್ಲೇಖ ಮಾಡಲು ಇಚ್ಛಿಸುವುದೆನೆಂದರೆ 1992ರಲ್ಲಿ ಆದಂತಹ ಅರಣ್ಯ ಲೂಟಿಯ ಬಗ್ಗೆ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಕೇರಳದ ಹಿರಿಯ ಪೊಲೀಸ್ ಅಧಿಕಾರಿ ಡಿ.ಐ. ಜಿಯಾಗಿರುವಂತಹ ಶ್ರೀ ಜಾರ್ಜ್ ಜೇಕಬ್ ರವರ ಪತ್ನಿ ಡೈಸಿ ಜೇಕಬ್‌ರವರು ಮಡಿಕೇರಿ ತಾಲ್ಲೂಕಿನ ಭಾಗಮಂಡಲದ ಕೋಪಟ್ಟಿ ಗ್ರಾಮದಲ್ಲಿರುವ ಸರ್ವೆ ನಂಬರ್ 1:19 ಹಾಗೂ 1:23ರಲ್ಲಿರುವ ಒಟ್ಟಾರೆ 135 ಎಕರೆ ಸ್ಥಳದಲ್ಲಿ ರಬ್ಬರ್ ಕೃಷಿಗೆ ಅನುಕೂಲ ಮಾಡಿಕೊಳ್ಳಲು ಸಂಬಂಧಿತ ಸ್ಥಳದಲ್ಲಿ ಮರಗಳನ್ನು ಕಡಿಯಲು ಪರವಾನಗಿಯನ್ನು ಕೋರಲಾಗಿತ್ತು.

ಉಪಾಧ್ಯಕ್ಷರು : ತಾವು ಶೂನ್ಯ ವೇಳೆಯಲ್ಲಿ ಸಂಕ್ಷಿಪ್ತವಾಗಿ ವಿಷಯವನ್ನು ಪ್ರಸ್ತಾಪ ಮಾಡಬೇಕು. ನೀವು ಪುಸ್ತಕದಲ್ಲಿ ಬರೆದುಕೊಂಡು ಬಂದು ಓದುತ್ತಾ ನಿಂತರೆ ಆಗುವುದಿಲ್ಲ.

ಶ್ರೀ ಹೆಚ್. ಡಿ. ಬಸವರಾಜ್ : ಇವರು ದಿ:13.4.1992ರಲ್ಲಿ ಪತ್ರ ಬರೆದಿದ್ದಾರೆ. ಇದನ್ನು ಜಿಲ್ಲಾಧಿಕಾರಿಯವರು ಪರಿಶೀಲನೆ ಮಾಡಿ ಸ್ಥಳ ಮತ್ತು ಸ್ಥಳದಲ್ಲಿರುವಂತಹ ಮರಗಳ ಮೇಲೆ ಹಕ್ಕಿದೆ. ಈ ಹಕ್ಕನ್ನು ಇವರು ಚಲಾವಣೆ ಮಾಡುವುದಕ್ಕೋಸ್ಕರ ಮುಂದಿನ ಕ್ರಮಕ್ಕೆ ಏನು ಮಾಡುತ್ತಾರೆಂದರೆ ಈ ಅರ್ಜಿಯನ್ನು ಅರಣ್ಯಾಧಿಕಾರಿಗಳಿಗೆ ರವಾನೆ ಮಾಡುತ್ತಾರೆ. ಇದಕ್ಕೆ ಮಡಿಕೇರಿ ಉಪ ಅರಣ್ಯಾಧಿಕಾರಿ ಈ ಪ್ರದೇಶವನ್ನು ವೀಕ್ಷಣೆ ಮಾಡಿ ಇದರಿಂದ ಪರಿಸರಕ್ಕೆ ಹಾನಿಯಾಗುತ್ತದೆ. ಇಲ್ಲಿ ಯಾವುದೇ ಕಾರಣಕ್ಕೂ ಮರಗಳನ್ನು ಕಡಿಯಬಾರದೆಂದು, ಈ ರೀತಿ ಮರಗಳನ್ನು ಕಡಿದರೆ ಬಹಳಷ್ಟು ಧಕ್ಕೆಯಾಗುತ್ತದೆ. ಆ ದೃಷ್ಟಿಯಿಂದ ಈ ಅರ್ಜಿಯನ್ನು ವಿಲೇವಾರಿ ಮಾಡತಕ್ಕದ್ದಲ್ಲವೆಂದು ಅರ್ಜಿಯನ್ನು

ವಾಪಸ್ಸು ಕಳುಹಿಸಿದ್ದಾರೆ. ನಾನು ಭಾಷಣ ಮಾಡುತ್ತಿಲ್ಲ, ಪಾಯಿಂಟ್ ಬೈ ಪಾಯಿಂಟ್ ನಾನು ಕೊಡುತ್ತಿದ್ದೇನೆ.

ಉಪಾಧ್ಯಕ್ಷರು : ತಾವು ಸಂಕ್ಷಿಪ್ತವಾಗಿ ಕೇಳಲಿಲ್ಲವೆಂದರೆ ನಾವು ಸಭೆಯನ್ನು ಮುಂದೂಡಬೇಕಾಗುತ್ತದೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಇವತ್ತು ಬೆಳಿಗ್ಗೆ ಆದು ಪತ್ರಿಕೆಯಲ್ಲಿ ಬಂದಿದೆ, ತಕ್ಷಣ ನಮ್ಮ ಅಧಿಕಾರಿಗಳನ್ನು ಕರೆಯಿಸಿ ಮಾತನಾಡಿದ್ದೇನೆ. ಇದು ಮಾಡಿರುವುದು ನಿಜ. ಏಕೆಂದರೆ ಅವರ ಸ್ವಂತ ಜಮೀನು ಏನಿತ್ತು ಅದರ ಪಕ್ಕ 38 ಎಕರೆ ಜಮೀನಿನ ಪ್ರದೇಶದಲ್ಲಿರುವ ಮರಗಳನ್ನು ಗುತ್ತಿಗೆದಾರರು ಕಡೆದಿದ್ದಾರೆ. ಇದು 1982ರಲ್ಲಿ ನಡೆದಿರುವುದು, ಈಗ ನಾನು ಒಂದು ಭರವಸೆಯನ್ನು ತಮ್ಮ ಮೂಲಕ ಅವರಿಗೆ ಕೊಡುವುದಕ್ಕೆ ಇಚ್ಛಿಪಡುವುದೇನೆಂದರೆ, ಈಗ ಒಬ್ಬ ಉನ್ನತ ಅಧಿಕಾರಿಯನ್ನು ಕಳುಹಿಸಿ ಎನ್‌ಕ್ವೈರಿ ಮಾಡಿಸುತ್ತೇನೆ, ಆ ವರದಿ ಬಂದ ಮೇಲೆ ಸಿ.ಓ.ಡಿ. ತನಿಖೆಗೆ ಹಾಕುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ಬಸವರಾಜ್‌ರವರು ಸದನದ ಬಾವಿಯೊಳಗೆ ಬಂದು ನಿಂತರು)

ಉಪಾಧ್ಯಕ್ಷರು : ತಾವು ಬಾವಿಯಲ್ಲಿ ನಿಂತು ಮಾತನಾಡಬಾರದು ದಯಮಾಡಿ ತಮ್ಮ ಸ್ಥಾನಕ್ಕೆ ಮರಳಿ. ಶೂನ್ಯವೇಳೆಯಲ್ಲಿ ಚರ್ಚೆ ಇಲ್ಲ, ಕೊನೆಯದಿವಸದ ಅಧಿವೇಶನವೆಂದು ನಾವು ಎಲ್ಲರಿಗೂ ಅವಕಾಶ ಮಾಡಿಕೊಡುತ್ತಿದ್ದೇನೆ. ದಯಮಾಡಿ ತಾವು ಸಹಕರಿಸಬೇಕು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಂತ್ರಿಗಳು ಸಮಾಧಾನಕರವಾದ ಉತ್ತರವನ್ನು ಕೊಡಲಿ.

ಶ್ರೀ ಡಿ. ಮಂಜುನಾಥ್ : ಅವರು ತಮ್ಮ ಸ್ಥಾನಕ್ಕೆ ತೆರಳಲಿ, ನಾನು ಸರಿಯಾದ ಉತ್ತರವನ್ನೇ ಹೇಳುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ಬಸವರಾಜ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಅವರ ಸ್ವಂತ ಜಮೀನೂ ಕೂಡ ಇದೆ, ಆ ಜಮೀನ ಪಕ್ಕದಲ್ಲಿರುವ 38 ಎಕರೆ ಜಮೀನನ್ನು ಎನ್‌ಕ್ರೋಚ್ ಮಾಡಿದ್ದಾರೆ. ಆಮೇಲೆ ಅವರು ಪರವಾನಿಗೆ ತೆಗೆದುಕೊಂಡು ಏನು ಮಾಡಿದ್ದಾರೆಂದರೆ ಅಲ್ಲಿಯ ಭೂಮಾಪನ ಇಲಾಖೆಯವರು ಅಳತೆ ಮಾಡಿ ತಪ್ಪು ಅಳತೆಯನ್ನು ಕೊಟ್ಟಿದ್ದಾರೆ. ಅದಾದ ಮೇಲೆ ನಮ್ಮ ಅರಣ್ಯ ಸಂರಕ್ಷಣಾಧಿಕಾರಿಗಳು ಅದಕ್ಕೆ ಒಪ್ಪಿಲ್ಲ. ಜಿಲ್ಲಾಮಟ್ಟದಲ್ಲಿ ಟ್ರೆ ಅಥಾರಿಟಿ ಎಂದು ಒಂದಿದೆ, ಅದರಲ್ಲಿ ನಮ್ಮ ಅಧಿಕಾರಿಗಳು ಇರುತ್ತಾರೆ. ಟ್ರೀ ಅಥಾರಿಟಿಯವರು ಅವರಿಗೆ ಮರಗಳನ್ನು ಕಡಿಯಬಹುದೆಂದು ಅನುಮತಿಯನ್ನು ಕೊಟ್ಟುಬಿಟ್ಟರು. ಭೂಮಾಪನ ಇಲಾಖೆಯವರು ತಪ್ಪು

ಅಳತೆಯನ್ನು ಕೊಟ್ಟಿದ್ದಾರೆ, ಆದಾದ ಮೇಲೆ ಮರಗಳನ್ನು ಕಡಿದಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಮೇಲೆ ಆ 38 ಎಕರೆ ಜಮೀನನ್ನು ನಮ್ಮ ವಶಕ್ಕೆ ತೆಗೆದುಕೊಂಡಿದ್ದೇವೆ. ಪ್ರಶ್ನೆ ಏನೆಂದರೆ ಆ ಮರಗಳನ್ನು ಕಡಿದುಕೊಂಡು ಹೋಗಿ ಹೋಗಿದ್ದಾರೆ, ಸುಮಾರು 1 ಕೋಟಿ 78ಲಕ್ಷ ರೂಪಾಯಿಗಳನ್ನು ರಿಕವರಿ ಮಾಡಬೇಕು. ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ, ಅದಕ್ಕಾಗಿ ನಾನು ಈಗಾಗಲೇ ನಮ್ಮ ಅಧಿಕಾರಿಗಳನ್ನು ಕರೆಯಿಸಿ ಮಾತನಾಡಿದ್ದೇನೆ. ಅವರ ಮೇಲೆ ಒಂದು ಕ್ರಿಮಿನಲ್ ಕೇಸ್ ಹಾಕಿ ಎಂದು ಹೇಳಿದ್ದೇನೆ, ಏಕೆಂದರೆ ಅತಿಕ್ರಮಣ ಮಾಡಿ ಮರಕಡಿದು ತೆಗೆದುಕೊಂಡು ಹೋಗಿದ್ದಾರೆ, ತೆಫ್ಟ್ ಕೇಸ್, trespass and theft case 38 ಎಕರೆ ಜಮೀನನ್ನು ನಮ್ಮ ವಶಕ್ಕೆ ತೆಗೆದುಕೊಂಡಿದ್ದೇವೆ, ಅದು ಅರಣ್ಯ ಇಲಾಖೆಯ ವಶದಲ್ಲೇ ಇದೆ. ಈಗ ಅಧಿಕಾರಿಗಳು ಶಾಮೀಲಾಗಿದ್ದಾರೆಂದು ಏನು ಹೇಳುತ್ತಾರೊ ಅದಕ್ಕೆ ನಾವು ಉನ್ನತ ಅಧಿಕಾರಿಯನ್ನು ಕಳುಹಿಸಿ ಎನ್‌ಕ್ವೈರಿ ಮಾಡಿಸಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಮರ ಹೋಗಿಬಿಟ್ಟಿದೆ, ಅದನ್ನು ಮುಟ್ಟುಗೋಲು ಹಾಕುವುದಕ್ಕಾಗುವುದಿಲ್ಲ, ಅದರ ಮೌಲ್ಯ 1 ಕೋಟಿ 78ಲಕ್ಷ ರೂಪಾಯಿಗಳದು, ಅದಕ್ಕ ನಾವು ಕೋರ್ಟಿನಲ್ಲಿ ಒಂದು ಕ್ರಿಮಿನಲ್ ಕೇಸ್ ಹಾಕುತ್ತೇವೆ, ಈ ಹಣ ಯಾವ ರೀತಿ ವಸೂಲ್ಮಾಡಬೇಕೆನ್ನುವುದರ ಬಗ್ಗೆಯು ಕೂಡ ಸಿವಿಲ್ ಕೋರ್ಟಿನಲ್ಲಿ ಒಂದು ಕೇಸ್ ಹಾಕಬೇಕಾಗಿದೆ. ಈ ಅಧಿಕಾರಿಗಳು ಯಾರ್ಯಾರು ಶಾಮೀಲಾಗಿದ್ದಾರೋ ಅದರ ಬಗ್ಗೆ ಎನ್‌ಕ್ವೈರಿ ಮಾಡಲು ಇಲ್ಲಿಂದ ಉನ್ನತ ಅಧಿಕಾರಿಗಳನ್ನು ಕಳುಹಿಸುತ್ತೇನೆ, ಅವರ ವರದಿಯ ಆಧಾರದ ಮೇಲೆ ಇದನ್ನು ಸಿಓಡಿಗೆ ರೆಫರ್ ಮಾಡುತ್ತೇನೆ.

ಉಪಾಧ್ಯಕ್ಷರು : ಈಗ ಸಗೀರ್ ಅಹಮ್ಮದ್‌ರವರು ಮಾತನಾಡುವುದು, ಬಸವರಾಜ್ ರವರೇ ಹೀಗೆ ಪದೆ ಪದೆ ಮಾತನಾಡುವುದು ಸರಿಯಲ್ಲ, ಮಾತನಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ಅಧ್ಯಕ್ಷರೇ, ಅವಕಾಶವನ್ನು ಕೊಡಲೇಬೇಕು.

(ಗೊಂದಲ)

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಪುನಃ ಒಂದು ಗಂಟೆಯ ನಂತರ ಸೇರುವುದು.

(ಸದನವು ಮಧ್ಯಾಹ್ನ 2 ಗಂಟೆ 25 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಒಂದು ಗಂಟೆ ನಂತರ ಸೇರಲು ನಿಶ್ಚಯಿಸಿತು)

(ಸದನವು ಪುನಃ 3.40ಕ್ಕೆ ಪ್ರಾರಂಭವಾಯಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)